

بِسْمِ اللّٰہِ الرَّحْمٰنِ الرَّحِیم

# ಜುಮುಅಃ ನಮಾಝ್‌ನ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸ್ಜಿದ್‌ನಿಂದ 31–05–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَا أَيُّهَا الَّذِينَ آمَنُوا إِذَا نُودِيَ لِلصَّلَاةِ مِن يَوْمِ الْجُمُعَةِ فَاسْعَوْا إِلَىٰ ذِكْرِ اللَّهِ وَذَرُوا الْبَيْعَ ۚ ذَٰلِكُمْ خَيْرٌ لَّكُمْ إِن كُنتُمْ تَعْلَمُونَ ﴿١٠﴾

فَإِذَا قُضِيَتِ الصَّلَاةُ فَانتَشِرُوا فِي الْأَرْضِ وَابْتَغُوا مِن فَضْلِ اللَّهِ وَاذْكُرُوا اللَّهَ كَثِيرًا لَّعَلَّكُمْ تُفْلِحُونَ ﴿١١﴾

وَإِذَا رَأَوْا تِجَارَةً أَوْ لَهْوًا انفَضُّوا إِلَيْهَا وَتَرَكُوكَ قَائِمًا ۚ قُلْ مَا عِندَ اللَّهِ خَيْرٌ مِّنَ اللَّهْوِ وَمِنَ التِّجَارَةِ ۚ وَاللَّهُ خَيْرُ الرَّازِقِينَ ﴿١٢﴾

ಈ ವಚನಗಳ ಭಾಷಾಂತರ ಹೀಗೆ:

ಎಲೈ ಸತ್ಯ ವಿಶ್ವಾಸಿಗಳೇ, ಶುಕ್ರವಾರ ದಿನದಂದು ನಿಮ್ಮನ್ನು ಪ್ರಾರ್ಥನೆಗೆ ಕರೆಯಲಾದರೆ, ಅಲ್ಲಾಹನನ್ನು ಸ್ಮರಿಸಲಿಕ್ಕೋಸ್ಕರ ನೀವು ತ್ವರಿತವಾಗಿ ಹೋಗಿರಿ; ನಿಮ್ಮ ವ್ಯಾಪಾರ ವ್ಯವಹಾರವನ್ನೆಲ್ಲ ನಿಲ್ಲಿಸಿರಿ. ನೀವು ಮನವರಿಕೆ ಮಾಡಿದರೆ ಅದೇ ನಿಮಗೆ ಉತ್ತಮವಾದುದು. ಪ್ರಾರ್ಥನೆ ಮುಗಿದ ಬಳಿಕ ನೀವು ಭೂಮಿಯಲ್ಲಿ ಚದುರಿ ಹೋಗಿ ಅಲ್ಲಾಹನ ಅನುಗ್ರಹವನ್ನು ಅರಸಿರಿ. ನೀವು ಯಶಸ್ಸುಗಳಿಸಲಿಕ್ಕೋಸ್ಕರ ಅಲ್ಲಾಹನ ಸ್ಮರಣೆಯನ್ನು ಹೆಚ್ಚಾಗಿ ಮಾಡಿರಿ. ಯಾವುದಾದರೂ ವ್ಯಾಪಾರವನ್ನಾಗಲಿ ವಿನೋದವನ್ನಾಗಲಿ ಕಂಡರೆ ಅವರು (ಕಪಟ ವಿಶ್ವಾಸಿಗಳು) ಅದರೆಡೆಗೆ ಸೆಳೆಯಲ್ಪಟ್ಟು, ನಿನ್ನನ್ನು (ಪ್ರವಚನಕ್ಕೆ) ನಿಂತ ಸ್ಥಿತಿಯಲ್ಲೇ ಬಿಟ್ಟು ಹೋಗುವರು. ಹೇಳು: 'ವಿನೋದ ಮತ್ತು ವ್ಯಾಪಾರಕ್ಕಿಂತ ಅಲ್ಲಾಹನ ಬಳಿಯಲ್ಲಿರುವುದು ಉತ್ತಮವಾದುದಾಗಿದೆ. ಅನ್ನದಾತರಲ್ಲಿ ಅಲ್ಲಾಹನು ಅತ್ಯುತ್ತಮನಾಗಿದ್ದಾನೆ.' (ಸೂರತುಲ್ ಜುಮುಅಃ 10–12)

ಈ ದಿನ ರಮಝಾನ್ ತಿಂಗಳ ಕೊನೆಯ ಜುಮುಅ ಆಗಿದೆ. ಈ ದಿನದ ಜುಮುಅ ನಮಾಝ್‌ನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನರು ಭಾಗವಹಿಸುವ ಒಲವು ಹೊಂದಿರುತ್ತಾರೆ. ಈ ದಿನದ ನಮಾಝ್‌ನಲ್ಲಿ ಭಾಗವಹಿಸಲು ವಿಶಿಷ್ಟ ಆಸಕ್ತಿಯಿಂದ ಪ್ರಯತ್ನಿಸುತ್ತಾರೆ. ಸೂರತುಲ್ ಜುಮುಅದ ಕೊನೆಯ ವಚನಗಳನ್ನು ನಾನು ಪಠಿಸಿದೆನು. ಅವುಗಳಲ್ಲಿ ಜುಮುಅ ನಮಾಝಿನ ಮಹತ್ವದ ಬಗ್ಗೆ ಅಲ್ಲಾಹನು ಸ್ಪಷ್ಟವಾಗಿ ವಿಶದೀಕರಿಸಿದ್ದಾನೆ. ಆದುದರಿಂದ ಜುಮುಅ ನಮಾಝ್‌ನಲ್ಲಿ ಭಾಗವಹಿಸುವುದು ಅಲ್ಲಾಹನ ದೃಷ್ಟಿಯಲ್ಲಿ ಬಹಳ ಆವಶ್ಯಕವಾಗಿದೆ. ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ, ಜುಮುಅ ನಮಾಝನ್ನು ಅನುಷ್ಠಿಸಲು ಕರೆ ನೀಡಿದಾಗ ಯಾವುದೇ ರೀತಿಯ ಉದಾಸೀನತೆ ಪ್ರಕಟಿಸದೆ ತಕ್ಷಣ ಅದರ ಬಗ್ಗೆ ಗಮನ ಹರಿಸಿ ಜುಮುಅ ನಮಾಝ್ ಅನುಷ್ಠಿಸಲು ಉಪಸ್ಥಿತರಾಗಿರಿ. ವ್ಯಾಪಾರದ ಅತ್ಯಂತ ಮಹತ್ವಪೂರ್ಣ ಸಮಯವಾಗಿದ್ದರೂ ಲಕ್ಷಗಟ್ಟಲೆ ಅಥವಾ ಕೋಟಿಗಟ್ಟಲೆ ಹಣ ನಷ್ಟವಾಗುವುದಾದರೂ ಅದರ ಬಗ್ಗೆ ಲಕ್ಷ್ಯ ನೀಡಬೇಡಿರಿ. ಲೌಕಿಕವಾದ ಲಕ್ಷಗಟ್ಟಲೆ ಅಥವಾ ಕೋಟಿಗಟ್ಟಲೆ ಹಣದ ನಷ್ಟವನ್ನು ನಿರ್ಲಕ್ಷಿಸಿ ಜುಮುಅ ನಮಾಝಿಗೆ ಹಾಜರಾಗಬೇಕು. ಏಕೆಂದರೆ ಜುಮುಅ ನಮಾಝ್‌ನಲ್ಲಿ ಭಾಗವಹಿಸುವುದು, ಜಾಮಿಅ ಮಸ್‌ಜಿದ್‌ಗೆ ಹೋಗಿ ನಮಾಝ್ ನಿರ್ವಹಿಸುವುದು, ಇಮಾಮರ ಖುತ್‌ಬ ಆಲಿಸುವುದು, ನಿಮಗೆ ನಿಮ್ಮ ವ್ಯಾಪಾರ ವ್ಯವಹಾರಗಳಿಗಿಂತ, ಲೌಕಿಕ ಕೆಲಸಗಳಿಗಿಂತ ಸಾವಿರಾರು ಅಲ್ಲ ಲಕ್ಷಗಟ್ಟಲೆ ಪಟ್ಟು ಉತ್ತಮವಾಗಿದೆ. ಆದರೆ ಅದರ ಸರಿಯಾದ ಅರಿವು ಅದರ ಬಗ್ಗೆ ಪ್ರಜ್ಞೆ ಗಳಿಸಿದವನಿಗೆ ಮಾತ್ರ ಇರುತ್ತದೆ. ಅಲ್ಲಾಹನು ಹೇಳುತ್ತಾನೆ ಅದರ ಬಗ್ಗೆ ಸರಿಯಾದ ಪ್ರಜ್ಞೆ ಹೊಂದಿದವನು ಖಂಡಿತವಾಗಿಯೂ ಲೌಕಿಕ ವ್ಯಾಪಾರಗಳಿಗೆ ಮತ್ತು ವ್ಯವಹಾರಗಳಿಗೆ ದ್ವಿತೀಯ ಸ್ಥಾನವನ್ನು ಮಾತ್ರ ನೀಡುವನು. ಜುಮುಅದ ನಮಾಝ್ ನಿರ್ವಹಿಸಿದ ನಂತರ ನಿಮಗೆ ಪೂರ್ಣ ಸ್ವಾತಂತ್ರ್ಯವಿದೆ ಎಂದು ಸಹ ಅಲ್ಲಾಹನು ಹೇಳಿದ್ದಾನೆ.. ನೀವು ಹೋಗಿ ನಿಮ್ಮ ಲೌಕಿಕ ಚಟುವಟಿಕೆಗಳಲ್ಲಿ ಮಗ್ನರಾಗಿರಿ. ಆಗ ಅಲ್ಲಾಹನು ನಿಮ್ಮ ಲೌಕಿಕ ಕರ್ಮಗಳಲ್ಲಿ ಅನುಗ್ರಹ ನೀಡುವನು. ಆದರೆ ನೀವು ನಿಮ್ಮ ಆರಾಧನೆಗಳನ್ನು ಜುಮುಅಕ್ಕೆ ಮಾತ್ರ ಸೀಮಿತಗೊಳಿಸಬಾರದು. ನೀವು ಅಲ್ಲಾಹನನ್ನು ಯಾವಾಗಲೂ ನೆನಪಿಸುತ್ತಾ ಇರಬೇಕು. ನೀವು ಅಲ್ಲಾಹನನ್ನು ಸ್ಮರಿಸುವ ಬಗ್ಗೆ ಲಕ್ಷ್ಯ ನೀಡುತ್ತಾ ಇರುವಿರಾದರೆ ನಿಮಗೆ ಅಲ್ಲಾಹನಿಂದ ಮೊದಲಿಗಿಂತ ಮಿಗಿಲಾಗಿ ಜಯ ಸಿಗುವುದು. ನಿಮಗೆ ಆಧ್ಯಾತ್ಮಿಕವಾಗಿಯೂ ಲೌಕಿಕವಾಗಿಯೂ ಜಯ ಸಿಗುವುದು. ಅಲ್ಲಾಹನನ್ನು ಸ್ಮರಿಸುವವರು ಅಲ್ಲಾಹನನ್ನು ಸ್ಮರಿಸುತ್ತಾ ಇರುವಾಗ, ಜುಮುಅದ ನಂತರ ಅಸರ್ ನಮಾಝ್ ನಿರ್ವಹಿಸಬೇಕೆಂದು ಅವರಿಗೆ ನೆನಪಾಗುತ್ತದೆ. ಇದು ಸಹ ಫರ್ಝ್‌ಗಳಲ್ಲಿ ಸೇರಿದೆ. ಮಗ್‌ರಿಬ್ ನಮಾಝನ್ನು, ಇಶಾ ನಮಾಝನ್ನು ನಿರ್ವಹಿಸಬೇಕೆಂದೂ ಅವು ಫರ್ಝ್‌ಗಳಲ್ಲಿ ಸೇರಿವೆ ಎಂದೂ ನೆನಪಿನಲ್ಲಿಡುತ್ತಾರೆ. ಲೌಕಿಕ ವಾಣಿಜ್ಯಗಳಲ್ಲಿ ಜಯ ಮತ್ತು ಇತರ ವರದಾನಗಳು ಎಲ್ಲವೂ ಅಲ್ಲಾಹನ ಅನುಗ್ರಹದಿಂದಲೇ ದೊರಕುತ್ತವೆ. ಆದುದರಿಂದ ಜಯವು ಅಲ್ಲಾಹನ ಸ್ಮರಣೆ ಮತ್ತು ಅವನನ್ನು ಆರಾಧನೆ ಮಾಡುವುದರೊಂದಿಗೆ ಸಂಬಂಧಿಸಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜುಮುಅದ ಮಹತ್ವದ ಬಗ್ಗೆ ವಿವರಿಸುತ್ತಾ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಜುಮುಅ ದಿನ ಈದ್ ದಿನವಾಗಿದೆ. ಅದು ಇತರ ಈದ್‌ಗಳಿಗಿಂತ ಮಹತ್ವಪೂರ್ಣವಾದುದಾಗಿದೆ. ಆ ಈದ್‌ಗಾಗಿ ಸೂರಃ ಜುಮುಅ ಅವತೀರ್ಣಗೊಂಡಿದೆ. ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಮತ್ತು ಒಬ್ಬ ಯಹೂದಿಯ ಮಧ್ಯೆ ನಡೆದ ಮಾತುಕತೆ ಬಗ್ಗೆ ಹೀಗೆ

ವಿವರಿಸಿದ್ದಾರೆ: ಪವಿತ್ರ ಖುರ್‌ಆನಿನ **ಅಲ್‌ಯೌಮ ಅಕ್‌ಮಲ್ತು ಲಕುಮ್ ದೀನಕುಮ್** ಎಂಬ ವಚನ ಅವತೀರ್ಣಗೊಂಡಾಗ ಒಬ್ಬ ಯಹೂದಿ ಹೇಳಿದನು: ನಮಗೆ ಈ ವಚನ ಅವತೀರ್ಣಗೊಳ್ಳುತ್ತಿದ್ದರೆ ನಾವು ಅದು ಅವತೀರ್ಣಗೊಂಡ ದಿನವನ್ನು ಈದ್ ಆಗಿ ಆಚರಿಸುತ್ತಿದ್ದೆವು. ಆಗ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು: ಜುಮುಅದ ದಿನ ಈದ್ ದಿನವೇ ಆಗಿದೆ. ಏಕೆಂದರೆ ಈ ವಚನ ಜುಮುಅದ ದಿನವೇ ಅವತೀರ್ಣಗೊಂಡಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನೇಕ ಜನರು ಈ ಈದ್ ಬಗ್ಗೆ ತಿಳಿಯದವರಾಗಿದ್ದಾರೆ. ಈ ದಿನ ಧರ್ಮ ಪರಿಪೂರ್ಣಗೊಳಿಸಲಾದ ಸಮಾಚಾರ ದೊರಕಿತು. ಅಲ್ಲಾಹನು ತನ್ನ ಅನುಗ್ರಹಗಳನ್ನು ಪರಿಪೂರ್ಣಗೊಳಿಸುವ ಬಗ್ಗೆ ಶುಭವಾರ್ತೆ ನೀಡಿದನು. ಆದರೆ ಪ್ರತಿಯೊಂದು ಜುಮುಅದ ಬಗ್ಗೆ ಲಕ್ಷ್ಯ ನೀಡದೆ ಜನರು ರಮಝಾನ್ ತಿಂಗಳ ಕೊನೆಯ ಜುಮುಅದಲ್ಲಿ ಮಾತ್ರ ಬಹಳ ಶ್ರದ್ಧೆಯಿಂದ ಹಾಜರಾಗಿ ವರ್ಷದ ಎಲ್ಲ ಜುಮುಅಗಳ ಪುಣ್ಯವನ್ನು ಗಳಿಸಬಹುದು ಎಂದು ಯೋಚಿಸುತ್ತಾರೆ. ನಾವು ಜುಮುಅಗಳ ಬಗ್ಗೆ ಬಹಳ ಶ್ರದ್ಧೆ ನೀಡಿ ಅದನ್ನು ಸಂರಕ್ಷಿಸಬೇಕಾಗಿದೆ. ರಮಝಾನಿನ ಕೊನೆಯ ಜುಮುಅಕ್ಕೆ ಮಹತ್ವ ನೀಡುವ ಹಾಗೆಯೇ ವರ್ಷವಿಡೀ ಎಲ್ಲ ಜುಮುಅ ದಿನಗಳಿಗೆ ಮಹತ್ವ ನೀಡುವ ಆವಶ್ಯಕತೆ ಇದೆ. ಆದರೆ ಬಹಳ ಜನರು ಈ ವಿಷಯದ ಕಡೆಗೆ ಗಮನ ಹರಿಸುವುದಿಲ್ಲ. ಅವರು ಲೌಕಿಕ ಚಟುವಟಿಕೆಗಳಿಗೆ, ಲೌಕಿಕ ಅಭಿರುಚಿಗಳಿಗೆ ಮಹತ್ವ ನೀಡಿ ತಮ್ಮ ಜುಮುಅವನ್ನು ಕೈ ಚೆಲ್ಲಿ ಬಿಡುತ್ತಾರೆ. ಅಲ್ಲಾಹನು ಹೇಳುತ್ತಾನೆ, ಅಲ್ಲಾಹನ ಬಳಿ ಇರುವುದು ಲೌಕಿಕ ವಸ್ತುಗಳಿಗಿಂತ, ಸಂಪತ್ತುಗಳಿಗಿಂತ, ಎಲ್ಲ ಅಭಿರುಚಿಗಳಿಗಿಂತ ಬಹಳ ಶ್ರೇಷ್ಠವಾಗಿವೆ ಎಂದು. ಅಲ್ಲಾಹನೇ ನಿಮಗೆ ಆಹಾರ ನೀಡುತ್ತಾನೆ. ಈ ವಿಷಯ ಬಹಳ ಮಹತ್ವಪೂರ್ಣವಾಗಿದೆ. ಪ್ರತಿಯೊಬ್ಬ ಸತ್ಯವಿಶ್ವಾಸಿ ಶ್ರದ್ಧಿಸಬೇಕಾದುದೂ ಆಗಿದೆ. ವಿಶಿಷ್ಟವಾಗಿ ಈ ಕಾಲಘಟ್ಟದ ಇಮಾಮರನ್ನು ನಂಬುವ ನಾವು ಅದರ ಬಗ್ಗೆ ವಿಶಿಷ್ಟವಾಗಿ ಲಕ್ಷ್ಯ ನೀಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: ಸತ್ಯವಾದ ಮಾತು ಏನೆಂದರೆ ಅಲ್ಲಾಹನು ಶಾಶ್ವತ ಜೀವಿತಕ್ಕೋಸ್ಕರ ಸೃಷ್ಟಿಸಿದ ನೀರಿನ ಝರಿಯ ಸಮೀಪಕ್ಕೆ ನೀವು ತಲಪಿರುವಿರಿ. ಆದರೆ ನೀರು ಕುಡಿಯುವುದು ಸಾಧ್ಯವಾಗಿಲ್ಲ. ಆದುದರಿಂದ ನೀವು ಅಲ್ಲಾಹನ ಕರುಣೆ ಮತ್ತು ಅನುಗ್ರಹವನ್ನು ಬೇಡಿಕೊಳ್ಳಿರಿ. ಅದರ ನೀರು ನಿಮ್ಮ ದಾಹವನ್ನು ನೀಗಿಸುವುದಾಗಲಿ. ಏಕೆಂದರೆ ಅಲ್ಲಾಹನ ಮೂಲಕವಲ್ಲದೆ ಯಾವುದೂ ಆಗಲು ಸಾಧ್ಯವಿಲ್ಲ. ನಾನು ದೃಢವಾಗಿ ನಂಬುತ್ತೇನೆ, ಈ ನೀರ ಝರಿಯಿಂದ ಕುಡಿಯುವವನು ನಾಶವಾಗಲಾರನು. ಆದರೆ ಈ ನೀರ ಝರಿಯಿಂದ ನೀರು ಕುಡಿಯಲು ಸಾಧ್ಯವಾಗುವ ವಿಧಾನಗಳು ಯಾವುವು? ಅಲ್ಲಾಹನು ಮನುಷ್ಯರ ಮೇಲೆ ಎರಡು ಹಕ್ಕುಗಳನ್ನು ವಿಧಿಸಿದ್ದಾನೆ. ಆ ಹಕ್ಕುಗಳನ್ನು ಪೂರ್ಣವಾಗಿ ಈಡೇರಿಸಿರಿ. ಅವುಗಳಲ್ಲಿ ಒಂದು ಅಲ್ಲಾಹನ ಹಕ್ಕುಗಳಾಗಿವೆ ಇನ್ನೊಂದು ಸೃಷ್ಟಿಗಳ ಹಕ್ಕುಗಳು.

ಅಲ್ಲಾಹನ ಹಕ್ಕುಗಳನ್ನು ಈಡೇರಿಸಲು ಅಲ್ಲಾಹನ ಸಂಪ್ರೀತಿ ಗಳಿಸುವುದು ಆವಶ್ಯಕವಾಗಿದೆ. ನಾವು ಅಲ್ಲಾಹನಿಗೆ ಆರಾಧನೆ ಸಲ್ಲಿಸುವ ಹಕ್ಕುಗಳನ್ನು ಈಡೇರಿಸಬೇಕು. ಅಲ್ಲಾಹನು ಹೇಳಿದ್ದಾನೆ: **ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್.** ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. (51:57). ನೀವು ಪ್ರಜ್ಞಾವಂತರಾಗುವ ಮೊದಲುಗೊಂಡು ಈ ಲೋಕಕ್ಕೆ ವಿದಾಯ ಹೇಳುವ ತನಕ ಈ ಕರ್ಮವನ್ನು ಸ್ಥಿರವಾಗಿ ಅನುಷ್ಠಿಸಬೇಕಾಗಿದೆ. ವರ್ಷದ ಒಂದು ಜುಮುಅಕ್ಕೆ ಮಾತ್ರ ಮಹತ್ವ ನೀಡದೆ ಪ್ರತಿಯೊಂದು ಜುಮುಅ ಮಹತ್ವಪೂರ್ಣವಾಗಿದೆ ಎಂದು ತಿಳಿದುಕೊಳ್ಳಿರಿ. ಒಂದು ಸಂದರ್ಭದಲ್ಲಿ ಜುಮುಅದ ಮಹತ್ವವನ್ನು ವಿವರಿಸುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನನ್ನೂ ಅಂತಿಮ ವಿಚಾರಣೆಯ ದಿನದ ಬಗ್ಗೆಯೂ ವಿಶ್ವಾಸ ಹೊಂದಿದವನು ಜುಮುಅ ನಮಾಝ್‌ನಲ್ಲಿ ಭಾಗವಹಿಸುವುದು ಫರ್ಝ್ ಆಗಿದೆ– ರೋಗಿಗಳು, ಪ್ರಯಾಣಿಕರು, ಮಹಿಳೆಯರು, ಮಕ್ಕಳು ಮತ್ತು ಗುಲಾಮರನ್ನು ಹೊರತು ಪಡಿಸಿ. ಆಟ, ವಿನೋದ, ವ್ಯಾಪಾರಗಳ ಕಾರಣದಿಂದ ಯಾರು ಜುಮುಅದ ಬಗ್ಗೆ ನಿರ್ಲಕ್ಷ್ಯತೆ ಹೊಂದುತ್ತಾನೋ ಅವನ ಬಗ್ಗೆ ಅಲ್ಲಾಹನೂ ನಿರ್ಲಕ್ಷಿಸುವನು. ನಿಶ್ಚಯವಾಗಿಯೂ ಅಲ್ಲಾಹನು ನಿರಪೇಕ್ಷನು ಮತ್ತು ಸ್ತುತ್ಯರ್ಹನು ಆಗಿದ್ದಾನೆ. ಜುಮುಅ ದಿನದ ಒಳಿತುಗಳ ಪ್ರತಿಫಲ ಅನೇಕಪಟ್ಟು ವರ್ಧಿಸುತ್ತದೆ.

ನಿಷ್ಕಾರಣವಾಗಿ ಜುಮುಅಕ್ಕೆ ಹಾಜರಾಗದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಮುನ್ನೆಚ್ಚರಿಕೆ ನೀಡಿದ್ದಾರೆ. ಅವರು ಹೇಳಿದರು: ಯಾರು ನಿಷ್ಕಾರಣವಾಗಿ ಜುಮುಅಕ್ಕೆ ಹಾಜರಾಗುವುದಿಲ್ಲವೋ ಅವನು ಕರ್ಮಗಳ ಕಡತದಲ್ಲಿ ಮುನಾಫಿಖ್ (ಕಪಟವಿಶ್ವಾಸಿ) ಎಂದು ಬರೆಯಲ್ಪಡುವನು. ಉದಾಸೀನತೆಯಿಂದ ಮೂರು ಜುಮುಅಗಳಿಗೆ ಹಾಜರಾಗದವನ ಹೃದಯದ ಮೇಲೆ ಮುದ್ರೆ ಹಾಕಲ್ಪಡುವುದು. ಆದುದರಿಂದ ಇದು ಬಹಳ ಭಯಪಡಬೇಕಾದ ವಿಷಯವಾಗಿದೆ. ಏಕೆಂದರೆ ಹೃದಯಕ್ಕೆ ಮುದ್ರೆ ಹಾಕಲ್ಪಟ್ಟರೆ ಒಳಿತುಗಳನ್ನು ಮಾಡುವ ಭಾಗ್ಯ ಸಹ ಸಿಗುವುದು ಕಡಿಮೆಯಾಗುತ್ತದೆ. ಜುಮುಅ ನಮಾಝ್ ನಿರ್ವಹಿಸಲು ಆಗಮಿಸುತ್ತಾ ಇರಬೇಕು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಒಬ್ಬ ವ್ಯಕ್ತಿ ಜುಮುಅದಿಂದ ಹಿಂದೆ ಸರಿಯುತ್ತಾ ಸ್ವರ್ಗದಿಂದಲೂ ಹಿಂದೆ ಸರಿಯುತ್ತಾನೆ. ಅವನು ಸ್ವರ್ಗದ ಅರ್ಹತೆ ಹೊಂದಿದವನಾಗಿದ್ದರೂ ಹಾಗೆ ಆಗುತ್ತಾನೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅದಲ್ಲಿ ಭಾಗವಹಿಸುವ ಬಗ್ಗೆ ಅನೇಕ ಸಂದರ್ಭಗಳಲ್ಲಿ ಉಪದೇಶಿಸಿದ್ದಾರೆ. ನಿಷ್ಕಾರಣವಾಗಿ ಜುಮುಅದಲ್ಲಿ ಭಾಗವಹಿಸದವರ ಬಗ್ಗೆ ಎಚ್ಚರಿಕೆ ಸಹ ನೀಡಿದ್ದಾರೆ. ಆದರೆ ರಮಝಾನ್ ತಿಂಗಳ ಕೊನೆಯ ಜುಮುಅದ ನಮಾಝ್ ನಿರ್ವಹಿಸಿದರೆ ನೀವು ಅಲ್ಲಾಹನಿಂದ ಕ್ಷಮಿಸಲ್ಪಡುವಿರಿ ಎಂದು ಅವರು ಒಮ್ಮೆಯೂ ಹೇಳಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು

ಒಬ್ಬ ಸತ್ಯವಿಶ್ವಾಸಿಯ ಚಿಹ್ನೆಯಾಗಿ ಹೀಗೆ ಹೇಳಿದ್ದಾರೆ: ಸತ್ಯವಿಶ್ವಾಸಿ ಒಂದು ನಮಾಝ್ ನಿರ್ವಹಿಸಿದ ನಂತರ ಮುಂದಿನ ನಮಾಝ್ ಬಗ್ಗೆ ಚಿಂತಿಸುತ್ತಾ ಅದರ ಸಮಯವನ್ನು ಕಾಯುತ್ತಾ ಇರುತ್ತಾನೆ. ಒಂದು ಜುಮುಅದ ನಮಾಝ್ ನಿರ್ವಹಿಸಿದ ನಂತರ ಮುಂದಿನ ಜುಮುಅದ ಬಗ್ಗೆ ಚಿಂತಿಸುತ್ತಾ ಪ್ರತೀಕ್ಷಿಸುತ್ತಾ ಇರುತ್ತಾನೆ. ಒಂದು ರಮಝಾನಿನ ಉಪವಾಸ ಅನುಷ್ಠಿಸಿದ ನಂತರ ಮುಂದಿನ ವರ್ಷದ ರಮಝಾನಿನ ಚಿಂತೆ ಮತ್ತು ಪ್ರತೀಕ್ಷೆಯಲ್ಲಿರುತ್ತಾನೆ. ಅವನು ಲೌಕಿಕ ಆಶೆಗಳು ಮತ್ತು ಕರ್ಮಗಳಿಗೋಸ್ಕರ ಜುಮುಅದ ತನ್ನ ನಮಾಝನ್ನು ಬಿಟ್ಟುಬಿಡುವುದಿಲ್ಲ.

ಆದುದರಿಂದ ನಾವು ನಮ್ಮ ಇಬಾದತ್‌ಗಳ ಬಗ್ಗೆ ಚಿಂತಿಸುವುದು ಆವಶ್ಯಕವಾಗಿದೆ. ನಮ್ಮ ಆದ್ಯತೆಗಳನ್ನು ಸರಿಯಾದ ಮಾರ್ಗದಲ್ಲಿರಿಸುವುದು ಆವಶ್ಯಕವಾಗಿದೆ. ಅಲ್ಲಾಹನ ಸಾಮೀಪ್ಯ ಗಳಿಸಲು ಒಂದು ಪರಿಶ್ರಮದ ಆವಶ್ಯಕತೆ ಇದೆ. ಆದರೆ ನಾವು ಚಿಂತಿಸುವುದಾದರೆ ನಮಗೆ ತಿಳಿಯುವುದು ಅಲ್ಲಾಹನ ವಾಸ್ತವಿಕ ಸ್ಥಾನ, ಅವನ ಮಹೋನ್ನತ ಸ್ಥಿತಿ ಬಗ್ಗೆ ನಾವು ಸರಿಯಾದ ಪರಿಚಯ ಹೊಂದಿಲ್ಲ ಎಂದು. ನಮ್ಮ ಪ್ರಾರ್ಥನೆಗಳಲ್ಲಿ ಸ್ಥಿರತೆ ಇರಬೇಕು. ನಮ್ಮ ಹೃದಯ ಕೇವಲ ಜುಮುಅಗಳಿಗೋಸ್ಕರ ಮಾತ್ರವಲ್ಲ ಪ್ರತಿದಿನದ ಐದು ಹೊತ್ತಿನ ನಮಾಝ್‌ಗಳಿಗೋಸ್ಕರ ಸಹ ಮಸ್‌ಜಿದ್‌ನೊಂದಿಗೆ ಆಸಕ್ತವಾಗಿರಬೇಕು. ಆದರೆ ನಾನು ಹೇಳಿದ ಹಾಗೆ ನಮಗೆ ಅದರ ಬಗ್ಗೆ ಪ್ರಜ್ಞೆ ಇಲ್ಲ. ನಾವು ತಾತ್ಕಾಲಿಕ ಮತ್ತು ತುರ್ತು ಆವಶ್ಯಕತೆಗಳ ಬಗ್ಗೆ ಹೆಚ್ಚು ಮಹತ್ವ ನೀಡುತ್ತೇವೆ. ನಾವು ಅಲ್ಲಾಹನನ್ನು ಮರೆತುಬಿಟ್ಟು ಅವನ ಆಜ್ಞೆಗಳನ್ನು ಲೌಕಿಕ ಆಶಾಭಿಲಾಷೆಗಳ ಹಿಂದಕ್ಕೆ ತಳ್ಳಿದರೆ ಅಂತಹ ಜನರ ಬಗ್ಗೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ, ಅಂತಹ ನಿರ್ಲಕ್ಷ್ಯತೆ ಹೊಂದಿದವರ ಬಗ್ಗೆ ಅಲ್ಲಾಹನು ಸಹ ನಿರ್ಲಕ್ಷ್ಯತೆ ಹೊಂದುವನು. ಮತ್ತು ಸ್ವರ್ಗವನ್ನು ಪಡೆಯುವ ಅರ್ಹತೆ ಹೊಂದಿದ್ದರೂ ಅಂತಹ ಮನುಷ್ಯನು ಸ್ವರ್ಗದಿಂದ ವಂಚಿತನಾಗುವನು.

ಆದುದರಿಂದ ಒಬ್ಬ ಸತ್ಯವಿಶ್ವಾಸಿಯ ಕೆಲಸವೇನೆಂದರೆ ಅವನು ಯಾವಾಗಲೂ ಅಲ್ಲಾಹನನ್ನು ತನ್ನ ದೃಷ್ಟಿಯಲ್ಲಿರಿಸಬೇಕು – ನನ್ನ ವ್ಯಾಪಾರ ಮತ್ತು ನನ್ನ ವ್ಯವಹಾರವೂ ನನ್ನ ಕೆಲಸವೂ ಅಲ್ಲಾಹನ ಅನುಗ್ರಹದಿಂದಲೇ ಅನುಗ್ರಹಿಸಲ್ಪಡಲು ಸಾಧ್ಯವಿದೆ ಎಂದು. ಅಲ್ಲಾಹನಿಂದಲೇ ಅನುಗ್ರಹ ದೊರಕುವುದರಿಂದ ಅವನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವ ವಿಷಯಕ್ಕೆ ಆದ್ಯತೆ ನೀಡುವ ಆವಶ್ಯಕತೆ ಇದೆ. ನಾವು ಈ ತತ್ವವನ್ನು ಮನವರಿಕೆ ಮಾಡುವುದಾದರೆ ನಮ್ಮ ಮಸ್‌ಜಿದ್‌ಗಳು ರಮಝಾನ್‌ನಲ್ಲಿ ಮಾತ್ರವಲ್ಲ ಬೇರೆ ದಿನಗಳಲ್ಲೂ ಐದು ಹೊತ್ತಿನ ನಮಾಝ್ ಸಮಯದಲ್ಲಿ ಜನರಿಂದ ತುಂಬಿರುವುದು. ಜುಮುಅದ ದಿನಗಳಲ್ಲಿ ಜನರಿಂದ ತುಂಬಿ ಜನರಿಗೆ ಸ್ಥಳವಕಾಶ ಸಾಕಾಗದೆ ಹೋಗುವುದು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನಿಂದ ನಿಯೋಜಿಸಲ್ಪಟ್ಟುದರ ಉದ್ದೇಶ ಇದುವೇ ಆಗಿದೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ನಮ್ಮ ನಿನ್ನೆಗಿಂತ ನಮ್ಮ ಈ ದಿನ ಉತ್ತಮವಾಗಿಲ್ಲವಾದರೆ ನಾವು ಸತ್ಯವಿಶ್ವಾಸಿಗಳಾಗಲಾರೆವು. ಆದುದರಿಂದ ನಾವು ಇಲ್ಲಿ ಜಮಾಯಿಸಿರುವುದು ಜುಮುಅಕ್ಕೆ ವಿದಾಯ ಕೋರಲಿಕ್ಕೋಸ್ಕರವಲ್ಲ. ನಮ್ಮ ಒಳಿತುಗಳಲ್ಲಿಯೂ ನಮ್ಮ ಇಬಾದತ್‌ಗಳಲ್ಲಿಯೂ ಅಲ್ಲಾಹನನ್ನು ಪ್ರೀತಿಸುವುದರಲ್ಲಿಯೂ ವರ್ಧಿಸುವ ರೀತಿಯಲ್ಲಿ ನಮ್ಮ ಹೆಜ್ಜೆಗಳನ್ನು ಬಲಿಷ್ಠಗೊಳಿಸಲು ಮತ್ತು ಹಾಗೆ ಸಾಧ್ಯವಾಲು ದುಆ ಮಾಡಲು ನಾವು ಇಲ್ಲಿ ಜಮಾಯಿಸಿದ್ದೇವೆ. ಆದುದರಿಂದ ನಾವು ಈ ದಿನ ಪ್ರತಿಜ್ಞೆ ಮಾಡಬೇಕು– ನಾವು ಇನ್ನು ಮುಂದೆ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಮುಂದೆ ಸಾಗುವೆವು ಇನ್‌ಶಾಅಲ್ಲಾಹ್ ಎಂದು. ಅಲ್ಲಾಹನ ಸಾಮೀಪ್ಯ ಗಳಿಸುವ ಮಹತ್ವದ ಬಗ್ಗೆ ಮನವರಿಕೆ ಆದರೆ ಮಾತ್ರ ಈ ಪ್ರತಿಜ್ಞೆ ಮಾಡಲು ಮತ್ತು ದುಆ ಮಾಡಲು ಸಾಧ್ಯವಾಗುವುದು. ಅಲ್ಲಾಹನು ವಾಸ್ತವಿಕವಾಗಿ ಎಲ್ಲಾ ಶಕ್ತಿಗಳ ಮಾಲಿಕ ಮತ್ತು ಉದ್ಭವಸ್ಥಾನ ಎಂದೂ ಅವನು ಎಲ್ಲಾ ಕೆಲಸಗಳನ್ನು ಅತ್ಯುತ್ತಮ ಅಂತಿಮ ಗತಿಗೆ ತಲಪಿಸುವ ಮಾರ್ಗ ಎಂದು ಮನವರಿಕೆ ಮಾಡಿಕೊಳ್ಳುವಾಗ ಇದು ಸಾಧ್ಯವಾಗುತ್ತವೆ.

ವಸ್ತುಗಳ ಮಹತ್ವ ಅವುಗಳ ಆವಶ್ಯಕತೆ ಮತ್ತು ಅವುಗಳ ಬಗ್ಗೆ ಜ್ಞಾನವನ್ನು ಗಳಿಸಿರುವುದಕ್ಕೆ ಅನುಸಾರವಾಗಿ ಅವಲಂಬಿಸಿರುತ್ತದೆ. ಅನೇಕ ಜನರು ತಮ್ಮ ಯೋಚನೆಯಲ್ಲಿರುವ ಆವಶ್ಯಕತೆಗೆ ಅನುಸಾರವಾಗಿ ವಸ್ತುಗಳ ಮಹತ್ವ ಕಂಡುಕೊಳ್ಳುತ್ತಾರೆ. ಸರಿಯಾದ ಜ್ಞಾನವಿಲ್ಲದ ಕಾರಣ ಎಂತಹ ವಸ್ತುಗಳನ್ನು ಬೆನ್ನಟ್ಟುತ್ತಾರೆಂದರೆ ಅವರು ಕಡಿಮೆ ಮಹತ್ವದ ವಸ್ತುಗಳನ್ನು ತಮಗೆ ಅತ್ಯಂತ ಮಹತ್ವಪೂರ್ಣವಾಗಿವೆ ಎಂದು ಭಾವಿಸುತ್ತಾರೆ. ಜನರು ನನ್ನೊಂದಿಗೆ ಹೇಳುತ್ತಾರೆ, ನಾವು ದುಆ ಮಾಡುತ್ತೇವೆ. ಬಹಳ ನೋವಿನೊಂದಿಗೆ ದುಆ ಮಾಡುತ್ತೇವೆ. ಆದರೆ ಅವು ಅಂಗೀಕರಿಸಲ್ಪಡುವುದಿಲ್ಲ. ನಾನು ಅವರಿಗೆ ಉತ್ತರ ನೀಡುತ್ತೇನೆ. ನಾನು ರಮಝಾನಿನ ಪ್ರಥಮ ಖುತ್‌ಬದಲ್ಲಿ ವಿಶದೀಕರಿಸಿದ ಪವಿತ್ರ ಖುರ್‌ಆನಿನ ವಚನಕ್ಕೆ ಅನುಸಾರವಾಗಿ ಉತ್ತರ ನೀಡುತ್ತೇನೆ. ಆ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: **ಉಜೀಬು ದಅ್‌ವತದ್ದಾಇ ಇಝಾದಆನೀ ಫಲ್‌ಯಸ್‌ತಜೀಬೂ ಲೀ ವಲ್ ಯೂಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್.** (ಓ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ, (ಹೇಳು) ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದುದರಿಂದ ಅವರು ಸತ್ಪಥ ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. (2: 187).

ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ವಚನವನ್ನು ಹೀಗೆ ವಿಶದೀಕರಿಸಿದ್ದಾರೆ. ಈ ವಚನದಲ್ಲಿ ದಅ್‌ವತದ್ದಾಇ ಎಂದು ಹೇಳಿದುದು ಪ್ರಾರ್ಥಿಸುವ ಪ್ರತಿಯೊಬ್ಬನ ಬಗ್ಗೆ ಅಲ್ಲ. ಅಲ್ಲಾಹನನ್ನು ವಿಶಿಷ್ಟವಾಗಿ ಪ್ರಾರ್ಥಿಸುವವರ ಬಗ್ಗೆ ಇಲ್ಲಿ ಉದ್ದೇಶಿಸಲಾಗಿದೆ. ಅವರು ಅಲ್ಲಾಹನಿಗೋಸ್ಕರ ಹಗಲು ಉಪವಾಸ ಅನುಷ್ಠಿಸುತ್ತಾರೆ. ಫರ್ಝ್ ನಮಾಝ್‌ಗಳನ್ನು ಅನುಷ್ಠಿಸುತ್ತಾರೆ. ಝಿಕ್ರೆ ಇಲಾಹಿ ಮಾಡುತ್ತಾ ಇರುತ್ತಾರೆ. ತಮ್ಮ ನಮಾಝ್‌ಗಳ ಮತ್ತು

ಜುಮುಅಗಳನ್ನು ಸಂರಕ್ಷಿಸುತ್ತಾರೆ. ಅವರು ರಾತ್ರಿ ಹೊತ್ತು ಅಳಲಿನೊಂದಿಗೆ ಅಲ್ಲಾಹನನ್ನು ಬೇಡಿಕೊಳ್ಳುತ್ತಾರೆ. ಅದ್ದಾಇ ಎಂಬ ಪದದ ಅರ್ಥ ನಿಸ್ಸಂಶಯವಾಗಿ ಪ್ರತಿಯೊಬ್ಬ ಪ್ರಾರ್ಥಿಸುವವನಿಗೂ ಅನ್ವಯಿಸುತ್ತದೆ. ಆದರೆ ಇಲ್ಲಿ ರಮಝಾನ್‌ಗೆ ಸಂಬಂಧಿಸಿ ಈ ಪ್ರಸ್ತಾಪ ನಡೆಸಲಾಗಿದೆ. ಅವರು ತಮ್ಮ ಇಬಾದತ್‌ಗಳನ್ನು ಕೇವಲ ರಮಝಾನಿಗೆ ಸೀಮಿತಗೊಳಿಸುವುದಿಲ್ಲ. ಅವರು ವರ್ಷವಿಡೀ ಆರಾಧನೆ ಮಾಡುತ್ತಾ ಇರುತ್ತಾರೆ. ಈ ಜನರು ಲೌಕಿಕ ಆಶಾಭಿಲಾಷೆಗಳಿಗೋಸ್ಕರ ಮಾತ್ರ ಪ್ರಾರ್ಥಿಸುವವರಲ್ಲ. ಬದಲಾಗಿ ಅಲ್ಲಾಹನ ಸಾಮಿಪ್ಯ ಗಳಿಸಲಿಕ್ಕಾಗಿ ದುಆ ಮಾಡುತ್ತಾರೆ. ಅಲ್ಲಾಹನು ಹೇಳುತ್ತಾನೆ: ಎಲ್ಲವನ್ನೂ ಮರೆತು ನನ್ನ ಸಾಮೀಪ್ಯ ಗಳಿಸಲು ಮಾತ್ರ ಪ್ರಾರ್ಥಿಸುವವರಾದ ಜನರ ಪ್ರಾರ್ಥನೆಗಳನ್ನು ನಿಶ್ಚಯವಾಗಿಯೂ ನಾನು ಆಲಿಸುವೆನು. ಅಲ್ಲಾಹನು ಹೇಳುತ್ತಾನೆ: ನನ್ನ ಸಾಮೀಪ್ಯ ಗಳಿಸಲು ಅತ್ಯಾಸಕ್ತಿ ಹೊಂದಿದವರನ್ನು ನಾನು ಖಂಡಿತವಾಗಿಯೂ ಭೇಟಿಯಾಗುತ್ತೇನೆ. ಕೆಲವರು ಬರೆಯುತ್ತಾರೆ: ನಾವು ಬಹಳ ಅಳಲಿನೊಂದಿಗೆ ಪ್ರಾರ್ಥಿಸಿದರೂ ಅಲ್ಲಾಹನು ಆಲಿಸಲಿಲ್ಲ ಎಂದು. ಅಲ್ಲಾಹನು ನಾನು ನಿಮ್ಮ ಸಕಲ ಲೌಕಿಕ ಆಶಾಭಿಲಾಷೆಗಳನ್ನು ಈಡೇರಿಸುವೆನು, ನಿಮ್ಮ ಪ್ರಾರ್ಥನೆ ಆಲಿಸುವೆನು ಎಂದು ಹೇಳಿಲ್ಲ. ಆದರೆ ನಾವು ನಮ್ಮಲ್ಲಿ ಪರಿಶುದ್ಧ ಬದಲಾವಣೆ ತಂದು ಅಲ್ಲಾಹನ ಸಾಮೀಪ್ಯ ಗಳಿಸಲು ಅಳಲಿನೊಂದಿಗೆ ಪ್ರಾರ್ಥಿಸುವುದಾದರೆ ಅಲ್ಲಾಹನು ಹೇಳಿದ್ದಾನೆ: ನಾನು ನಿಶ್ಚಯವಾಗಿಯೂ ನಿಮ್ಮ ಪ್ರಾರ್ಥನೆ ಆಲಿಸುವೆನು. ನಾನು ನನ್ನ ವಲಿಯ ಸ್ನೇಹಿತನಾಗುವೆನು ಮತ್ತು ಅವನ ಜೊತೆ ನಿಂತು ಅವನ ಬೇಡಿಕೆಗಳನ್ನು ಈಡೇರಿಸುವೆನು. ಮತ್ತು ಅವನ ಶತ್ರುವಿನೊಂದಿಗೆ ಹೋರಾಡುವೆನು.

ಒಟ್ಟಿನಲ್ಲಿ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದವರಾದುದರಿಂದ ನಾವು ನಮ್ಮ ಇಬಾದತ್‌ಗಳ ಮಟ್ಟವನ್ನು ಉನ್ನತಗೊಳಿಸುವ ಹೊಣೆಗಾರಿಕೆ ಹೊಂದಿದ್ದೇವೆ. ಈ ರಮಝಾನ್‌ನಲ್ಲಿ ನಾವು ಯಾವ ಆಧ್ಯಾತ್ಮಿಕ ಮಟ್ಟವನ್ನು ತಲಪಿದ್ದೇವೋ ಅಥವಾ ತಲಪಲು ಪ್ರಯತ್ನ ಮಾಡಿದ್ದೇವೋ ಅದರಿಂದ ಕೆಳಗೆ ತಮ್ಮನ್ನು ಬೀಳಿಸುವಂತೆ ಮಾಡಬೇಡಿರಿ. ನೀವು ನಿಮ್ಮ ನಮಾಝ್‌ಗಳ ಮಟ್ಟವನ್ನು ಉನ್ನತಗೊಳಿಸುತ್ತಾ ಮುಂದುವರಿಯಿರಿ. ನೀವು ಜುಮುಅಗಳಲ್ಲಿ ಹಾಜರಾಗುವುದನ್ನು ಸ್ಥಿರಗೊಳಿಸಿರಿ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾಗಿರಿ. ಅಲ್ಲಾಹನಿಂದ ಅವನ ಸಾಮೀಪ್ಯವನ್ನು ಬೇಡಿಕೊಳ್ಳುವವರ ಜೊತೆಗೆ ಸೇರುವವರಾಗಿರಿ. ನಮಗೆ ಅಲ್ಲಾಹನು ದೊರಕಲಿ ಎಂದು ಪ್ರಾರ್ಥಿಸುವವರಾಗಿರಿ. ನಮ್ಮ ನಮಾಝ್‌ಗಳು ಮತ್ತು ನಮ್ಮ ಅನ್ಯ ಇಬಾದತ್‌ಗಳು ಅಲ್ಲಾಹನ ಭೇಟಿಯನ್ನು ದಯಪಾಲಿಸುವವುಗಳಾಗಲಿ. ಅಲ್ಲಾಹನು ನಮಗೆ ಈ ಆಧ್ಯಾತ್ಮಿಕ ಉನ್ನತಮಟ್ಟವನ್ನು ಗಳಿಸುವ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At,Masjid Baithul Futhuh London, UK, On 31-05-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon